ಓಃಎಸ್ಃನಂ.334/2022

ಪಿ.ಡಬ್ಲ್ಯೂ- 3

**ದಿನಾಂಕಃ 31-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಬಿಟಿಕೆ **ವಕೀಲರಿಂದ**

ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯ ಹೊರತುಪಡಿಸಿ ಬೇರೆ ಏನೂ ಮಾಡುವುದಿಲ್ಲ. ನೀವು ಹಾಗೂ ಮಂಜುನಾಥ್ ರವರು ಯಾವಾಗಲೂ ಸಬ್ ರಿಜಿಸ್ಟರ್ ಕಛೇರಿಯಲ್ಲಿ ಇರುತ್ತಿರಾ ಎಂದರೆ ಸಾಕ್ಷಿ ಏನಾದರೂ ಕೆಲಸ ಇದ್ದರೆ ಇರುತ್ತೇವೆ ಎಂದು ನುಡಿದಿರುತ್ತಾರೆ. ನಾನು ಹಾಗೂ ಮಂಜುನಾಥ್ ರವರು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸೀಲ್ ಹಾಕುವ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಸಾಕ್ಷಿದಾರರು ಸಿಗದೇ ಹೋದರೆ ಸಾಕ್ಷಿದಾರರ ಸಹಿಯನ್ನು ಸಹ ಹಾಕುತ್ತಿರಾ ಎಂದರೆ ಸಾಕ್ಷಿ ಪರಿಚಯವಿದ್ದರೆ ಮಾತ್ರ ಹಾಕುತ್ತೇವೆ ಎಂದು ನುಡಿದಿರುತ್ತಾರೆ. ಪತ್ರಬರಹಗಾರರು ತೆಗೆದುಕೊಂಡು ಬಂದ ಎಲ್ಲಾ ದಾಖಲಾತಿಗಳಿಗೂ ನೀವು ಸಹಿ ಮಾಡುತ್ತಿರಾ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯು ಹಣ ಭದ್ರತೆಗಾಗಿ ಮಾಡಿಕೊಂಡ ಪತ್ರಕ್ಕೂ ಸಾಕ್ಷಿ ಸಹಿ ಹಾಕಿರತ್ತಿರಾ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿದಿದ್ದು, ಅದು ವ್ಯವಹಾರ ಮಾಡಿಕೊಂಡ ಪತ್ರ ಆಗಿರುತ್ತದೆ ಎಂದು ನುಡಿದಿರುತ್ತಾರೆ.

ನಿಮ್ಮ ಹಾಗೂ ಮಂಜುನಾಥ್ ರವರ ಸಮಕ್ಷಮ ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ, ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸುಳ್ಳಿನಿಂದ ಕೂಡಿದ ಪ್ರಮಾಣ ಪತ್ರವನ್ನು ಹಾಕಿರುತ್ತಿರಾ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ವಾದಿಯು ಪ್ರತಿವಾದಿಗೆ 4 ಲಕ್ಷ ಹಣವನ್ನು ನೀಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿರುತ್ತಾರೆ ಅದಕ್ಕೆ

ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನನ್ನ ಹೇಳಿಕೆ ಪಡೆದು ತಯಾರು ಮಾಡಿರುತ್ತಾರೆಂದು ನುಡಿದಿರುತ್ತಾರೆ. ವಾದಿಯ ಹೇಳಿಕೆ ಮೇರೆಗೆ ನಿಮ್ಮ ಪ್ರಮಾಣ ಪತ್ರ ತಯಾರು ಆಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**